**ಒ.ಎಸ್.ನಂಬ್ರಃ 28/2011 ಪಿ .ಡಬ್ಲ್ಯೂಃ 1**

ದಿನಾಂಕಃ 09-07-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ. ಜಿ ಎಸ್ ಕೆ ಎಸ್ ವಕೀಲರಿಂದ

1. ಮೊಳಹಳ್ಳಿ ಗ್ರಾಮದ ಸರ್ವೆ ನಂಬ್ರ 251 ಮೂಲತಃ ಸರಕಾರಿ ಜಮೀನು ಎಂದರೆ ಸರಿ. ಅದು ಮೂಲತಃ ನೂರಾರು ಎಕರೆ ವಿಸ್ತೀರ್ಣದ ಜಮೀನು ಎಂದರೆ ಸರಿ. ಸದರಿ ಸರ್ವೆ ನಂಬ್ರ 251 ರಲ್ಲಿ 18 ಎಕರೆ 45 ಸೆಂಟ್ ಸ್ಥಳವನ್ನು ಈ ಕೇಸಿನ ಪ್ರತಿವಾದಿ ಶಿವರಾಮ ಹೆಗ್ಡೆರವರಿಗೆ ಗೇರು ಕೃಷಿಗೆ 30 ವರ್ಷದ ಗೇಣಿಗೆ ಕೊಟ್ಟಿರುತ್ತಾರೆ ಎಂದರೆ ಸರಿ. ಗೇಣಿಗೆ ಕೊಡುವಾಗ ಅ 18 ಎಕರೆ 45 ಸೆಂಟ್ ಜಾಗವನ್ನು ನಾಲ್ಕು ಭಾಗಗಳನ್ನಾಗಿ ಅಂದರೆ 251 ಎ 3 ಎಕರೆ 9 ಸೆಂಟ್, 251 ಬಿ 3 ಎಕರೆ 62 ಸೆಂಟ್ಸ್ 251 ಸಿ 5 ಎಕರೆ 82 ಸೆಂಟ್ಸ್ ಹಾಗೂ 251 ಡಿ 5 ಎಕರೆ 92 ಸೆಂಟ್ಸ್ ಗಳನ್ನಾಗಿ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಆ ಸಂದರ್ಭದಲ್ಲಿ ಸರಕಾರದವರು ಒಂದು ನಕ್ಷೆಯನ್ನು ತಯಾರಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ.

2. ಶಿವರಾಮ ಹೆಗ್ಡೆರವರು ಆ ಜಮೀನುಗಳನ್ನು ನೋಡಿಕೊಳ್ಳುವ ಸಲುವಾಗಿ ಎರಡು ಗುಡಿಸಲುಗಳನ್ನು ಕಟ್ಟಿಸಿದ್ದರು ಎಂದರೆ ಗೊತ್ತಿಲ್ಲ. ಸದರಿ ಎರಡು ಗುಡಿಸಲಿನ ಒಂದರಲ್ಲಿ ದೇವಿ ಹೆಂಗ್ಸು ಹಾಗೂ ಇನ್ನೊಂದು ಗುಡಿಸಲಿನಲ್ಲಿ ಹಳೇಯಮ್ಮ ಎನ್ನುವವರನ್ನು ಉಸ್ತುವಾಗಿ ನೋಡಿಕೊಳ್ಳಲು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. 1992 ನೇ ಇಸವಿಯಲ್ಲಿ ಸರಕಾರದವರು ಈ ಹಿಂದೆ ಗೇಣಿ ಕೊಟ್ಟಿದ್ದ ದ 18 ಎಕರೆ 45 ಸೆಂಟ್ ಜಾಗದಲ್ಲಿ 17 ಎಕರೆ 92 ಸೆಂಟ್ ಜಾಗವನ್ನು ದರ್ಖಾಸ್ತು ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. 53 ಸೆಂಟ್ ಜಾಗವನ್ನು ಕಳೆಯಲು ಕಾರಣ 25 ಸೆಂಟ್ ಜಾಗವನ್ನು ದೇವಿ ಹೆಂಗ್ಸು ಎನ್ನುವವರು ಅತಿಕ್ರಮಣ ಮಾಡಿರುತ್ತಾರೆ ಎಂದು ಪರಿಗಣಿಸಿ ಆ ಜಾಗವನ್ನು ದರ್ಖಾಸ್ತು ಮಾಡಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಅದೇ ರೀತಿ ಹಳೆಯಮ್ಮನವರು 28 ಸೆಂಟ್ ಜಾಗವನ್ನು ಅತಿಕ್ರಮಣ ಮಾಡಿರುತ್ತಾರೆ ಎಂದು ಪರಿಗಣಿಸಿ ಅವರಿಗೆ 28 ಸೆಂಟ್ ಜಾಗವನ್ನು ದರ್ಖಾಸ್ತು ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

3. ಸರಕಾರದವರು ಪ್ರತಿವಾದಿಗೆ ದರ್ಖಾಸ್ತು ಮಾಡಿದ್ದ 17 ಎಕರೆ 98 ಸೆಂಟ್ ಜಾಗವನ್ನು ನಾಲ್ಕು ಭಾಗಗಳನ್ನಾಗಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸದರಿ

ನಾಲ್ಕು ಭಾಗಗಳೆಂದರೆ 251 ಎ 3 ಎಕರೆ 9 ಸೆಂಟ್, 251 ಬಿ 3 ಎಕರೆ 62 ಸೆಂಟ್ಸ್ 251 ಸಿ 5 ಎಕರೆ 29 ಸೆಂಟ್ಸ್ ಹಾಗೂ 251 ಡಿ 5 ಎಕರೆ 92 ಸೆಂಟ್ಸ್ ಗಳನ್ನಾಗಿ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಅವರಿಗೆ ದರ್ಖಾಸ್ತು ಕೊಟ್ಟಂತಹ ದಾಖಲೆಯನ್ನು ನಾನು ನೋಡಿರುತ್ತೇನೆ. ನಿಪಿ.7 ನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಪ್ರತಿವಾದಿಗಳು ಮಾರುಕಟ್ಟೆ ಬೆಲೆಯನ್ನು ಧಾರಣೆ ಮಾಡಿ ಪಡೆದುಕೊಂಡಂತಹ ಸ್ಥಳ ಎಂದರೆ ಸರಿ. ಆ ಸಮಯದಲ್ಲಿ ಮಾರುಕತೆಟ್ಟ ಬೆಲೆ ಒಂದು ಸಾವಿರ ಇದ್ದು ಪ್ರತಿವಾದಿಗಳು ರೂ.17,920/- ಗಳನ್ನು ಸರಕಾರಕ್ಕೆ ಧಾರಣೆ ಮಾಡಿ ದರ್ಖಾಸ್ತು ಪಡೆದುಕೊಂಡಿರುತ್ತಾರೆ ಎಂದರೆ ಸರಿ.

4. ನಿಪಿ.7 ನ್ನು ಕೊಡುವಾಗಲೂ ಸರಕಾರದವರು ನಕ್ಷೆ ರಚಿಸಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದರ್ಖಾಸ್ತು ಆದ ನಂತರ ಪ್ರತಿವಾದಿಯ ಹೆಸರಿಗೆ ಪಹಣಿಗಳು ನಮೂದಾಗಿರುತ್ತದೆ ಎಂದರೆ ಸರಿ. ಅದೇ ರೀತಿ ಪ್ರತಿವಾದಿ ಕೊಟ್ಟಂತಹ ಸ್ಥಳದಲ್ಲಿ ಎಫ್.ಎಂ.ಬಿ ಯಲ್ಲಿ ಪ್ಲಾಟಿಂಗ್ ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಪ್ರಪ್ರಥಮ ಬಾರಿಗೆ ಪ್ರತಿವಾದಿಗಳು ದಿನಾಂಕ 11-02-1999 ರಲ್ಲಿ 10 ಎಕರೆ ಜಮೀನನ್ನು ರಾಮಕೃಷ್ಣ ಭಡಾರ್ಕರ್ ಎನ್ನುವವರಿಗೆ ಪರಭಾರೆ ಮಾಡಿರುತ್ತಾರೆ ಎಂದರೆ ಸರಿ. ಆ ದಾಖಲೆಯನ್ನು ನಾನು ಕ್ರಯ ಮಾಡುವಾಗ ನೋಡಿರುತ್ತೇನೆ.

5. ಸಾಕ್ಷಿಗೆ ಈಗ ನಿಪಿ.10 ಕ್ರಯ ಪತ್ರವನ್ನು ತೋರಿಸಿದ್ದು, ಅವರು ಒಪ್ಪಿ ಕೊಂಡಿರುತ್ತಾರೆ. ಸದರಿ ಕ್ರಯ ಪತ್ರದಲ್ಲಿ ಸರ್ವೆ ನಂಬ್ರ 251 ಡಿಯಲ್ಲಿ 5 ಎಕರೆ 92 ಸೆಂಟ್ಸ ಹಾಗೂ 251 ಸಿ ಯಲ್ಲಿ ನಾಲ್ಕು ಎಕರೆ 8 ಸೆಂಟ್ಸ್ ಅಂಶವನ್ನು ರಾಮಕೃಷ್ಣ ಭಂಡಾರ್ಕರ್ ರವರಿಗೆ ಪರಭಾರೆ ಮಾಡಿರುತ್ತಾರೆ ಎಂದರೆ ಸರಿ. ಆ ಕ್ರಯ ಪತ್ರದೊಂದಿಗೆ ಒಂದು ನಕ್ಷೆಯನ್ನು ಸಹ ಸೇರಿಸಿರುತ್ತಾರೆ ಎಂದರೆ ಸರಿ. ಸದರಿ ಮೂಲ ಕ್ರಯ ಪತ್ರ ನಮ್ಮ ಬಳಿ ಇರುತ್ತದೆ. ರಾಮಕೃಷ್ಣ ಭಂಡಾರ್ಕರ್ ರವರಿಗೆ ಕೊಟ್ಟಂತಹ ಸ್ಥಳವನ್ನು ನಕಾಶೆಯಲ್ಲಿ ಹಳದಿ ಬಣ್ಣದಲ್ಲಿ ಗುರುತಿಸಿರುತ್ತಾರೆ ಎಂದರೆ ಸರಿ. ಸದರಿ ಕ್ರಯ ಪತ್ರದಲ್ಲಿ ಹಳದಿ ಬಣ್ಣದಲ್ಲಿ ಗುರುತಿಸಿದಂತ ಜಾಗವನ್ನು ರಾಮಕೃಷ್ಣ ಭಂಡಾರ್ಕರ್ ರವರು ತೆಗೆದುಕೊಂಡಿರುತ್ತಾರೆ ಎಂದರೆ ಸರಿ.

6. ರಾಮಕೃಷ್ಣ ಭಂಡಾರ್ಕರ್ ರವರು ಕ್ರಯ ತೆಗೆದುಕೊಳ್ಳುವಾಗ ಅಳತೆ ಮಾಡಿ ಗುರುತಿಸಿ ನಕ್ಷೆಯನ್ನು ತಯಾರಿಸಿ ಕ್ರಯ ತೆಗೆದುಕೊಂಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ರಾಮಕೃಷ್ಣ ಭಂಡಾರ್ಕರ್ ರವರು ಕ್ರಯಕ್ಕೆ ತೆಗೆದುಕೊಂಡ ಜಾಗವನ್ನು ದಿನಾಂಕ 21-10-2006 ರಂದು ಕ್ರಯಕ್ಕೆ ನಮಗೆ ಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಸದರಿ

ದಾಖಲೆ ನಿಪಿ.12 ನ್ನು ತೋರಿಸಿದ್ದು, ಸಾಕ್ಷಿ ದಾಖಲೆ ನೋಡಿ ಗುರುತಿಸಿರುತ್ತಾರೆ. ರಾಮಕೃಷ್ಣ ಭಂಡಾರ್ಕರ್ ರವರು ನನಗೆ ಕ್ರಯಕ್ಕೆ ಕೊಡುವಾಗ ಅವರು ಖರೀದಿ ಮಾಡಿದ ದಾಖಲೆ

ಹಾಗೂ ಅವರಿಗೆ ಮಾರಾಟ ಮಾಡಿರುವವರ ದಾಖಲೆಗಳನ್ನು ನನಗೆ ಕೊಟ್ಟಿರುತ್ತಾರೆ ಎಂದರೆ ಸರಿ. ಆ ಎರಡು ದಾಖಲೆಗಳನ್ನು ನಾನು ಪರಿಶೀಲಿಸಿ ರಾಮಕೃಷ್ಣ ಭಂಡಾರ್ಕರ್ ರವರರಿಗೆ 10 ಎಕರೆ ಜಾಗಕ್ಕೆ ಹಕ್ಕು ಇದೆ ಎಂದು ತಿಳಿದು ಕ್ರಯ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ರಾಮಕೃಷ್ಣ ಭಂಡಾರ್ಕರ್ ರವರು ನನಗೆ ಮೋಸ ಮಾಡಿರುವುದಿಲ್ಲ. ಆ ನಂತರ ನಾನು ದಿನಾಂಕ 21-11-2006 ರನ್ನು ನಿಪಿ.13 ರ ಪ್ರಕಾರ ಸರ್ವೆ ನಂಬ್ರ 251 ಬಿ 3 ಎಕರೆ 62 ಸೆಂಟ್ಸ್ ಜಾಗವನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿ. ನಾನು ಖರೀದಿ ಮಾಡುವಾಗ ಸರ್ವೆ ನಂಬ್ರ 251 ಬಿ ಫುಲ್ ಸಬ್ ಡಿವಿಷನ್ ಆಗಿತ್ತು ಎಂದರೆ ಸರಿಯಲ್ಲ. ನಿಪಿ.13 ರಲ್ಲಿ ಬರೆದಿರುವ ಗಡಿ ವಿವರ ಸರಿ ಇರುತ್ತದೆ.

7. ನಿಪಿ.13 ರಂತೆ ಪ್ರತಿವಾದಿ ನನಗೆ ಕೊಟ್ಟ ಸ್ಥಳ 3 ಎಕರೆ 62 ಸೆಂಟ್ ಎಂದು ಖಾತ್ರಿ ಮಾಡಿಕೊಂಡು ನಾನು ಖರೀದಿಗೆ ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.13 ರಂತೆ ಎಷ್ಟು ವಿಸ್ತೀರ್ಣದ ಜಮೀನನ್ನು ನನಗೆ ಪ್ರತಿವಾದಿಗಳು ಖರೀದಿಗೆ ಕೊಟ್ಟಿರತ್ತಾರೆ ಎಂದು ಗೊತ್ತಿರುವುದಿಲ್ಲ. ಅವರು ವಿಸ್ತೀರ್ಣವನ್ನು ನಿಗದಿ ಪಡಿಸಿರಲಿಲ್ಲ ಎಂದು ನುಡಿಯುತ್ತಾರೆ. ನಿಪಿ.13 ನ್ನು ರತ್ನಾಕರ ಶೆಟ್ಟಿಯವರು ತಯಾರಿಸಿರುತ್ತಾರೆ. ನಿಪಿ.13 ಕ್ಕೆ ಸ್ಟಾಂಪ್ ಡ್ಯೂಟಿ ಹಾಗೂ ರಿಜಿಸ್ಟ್ರೇಷನ್ ಫೀ ಕೂಟ್ಟಿದ್ದು ನಾನೇ. ನಿಪಿ.13 ರ ದಸ್ತಾವೇಜಿನ ಸಾಕ್ಷಿದಾರರು ಮಂಜುನಾಥ ಶೆಟ್ಟಿ ಹಾಗೂ ಭೋಜರಾಜ ಶೆಟ್ಟಿ ಎಂದರೆ ಸರಿ. ಭೋಜರಾಜ ಶೆಟ್ಟಿರವರು ನನ್ನ ಮಾವ. ನಿಪಿ.13 ರನ್ನು ನಾನೇ ಮಾಹಿತಿ ನೀಡಿ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.13 ರಲ್ಲಿ ಎಷ್ಟು ವಿಸ್ತೀರ್ಣದ ಆಸ್ತಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಅದು ಫಿಕ್ಸ್ ಮಾಡಲು ಬರುವುದಿಲ್ಲ ಎಂದು ನುಡಿಯುತ್ತಾರೆ. 3 ಎಕರೆ 62 ಸೆಂಟ್ ಸ್ಥಳವನ್ನು ನಿಪಿ.10 ರ ಜೊತೆಗೆ ಅಳವಡಿಸಿದ ನಕಾಶೆಯಲ್ಲಿ 251 ಬಿ ಎಂದು ಕಾಣಿಸಿದ ಸ್ಥಳವನ್ನು ಕೊಟ್ಟಿರುತ್ತಾರೆ ಎಂದರೆ ಸರಿ.

ಈ ಸಂದರ್ಭದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕೋರಿಕೆ ಮೇರೆಗೆ ಮುಂದೂಡಲಾಯಿತು.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ .